(ಗೊಂದಲ)

(ಈ ಹಂತದಲ್ಲಿ ಮಾನ್ಯ ಎಸ್. ಸುರೇಶ್‌ಕುಮಾರ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಚಂದ್ರಕಾಂತಜಿ ಬೆಲ್ಲದ್ :- ಮಾನ್ಯ ಅಧ್ಯಕ್ಷರೇ, ನಿಮಗೆ ಅಭಿವೃದ್ಧಿಗಳ ಬಗ್ಗೆ ಚಿಂತನೆ ಇಲ್ಲ. You are politicalising it. This is very bad.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಫೈನಲ್ ನೋಟಿಫಿಕೇಶನ್ ಮಾಡುವುದಕ್ಕೆ ಮುಂಚೆ, ಪ್ರಿಲಿಮಿನರಿ ನೋಟಿಫಿಕೇಶನ್‌ನಲ್ಲಿ ಎಷ್ಟು ಮಾಡಿದ್ದೀರಿ?

ಶ್ರೀ ಧರ್ಮ್‌ಸಿಂಗ್ :- ಮಾನ್ಯ ಜಗದೀಶ್‌ಶೆಟ್ಟರ್‌ರವರೇ, You are Leader of the opposition ನೀವು ಸರ್ಕಾರ ಎಲ್ಲಿ ಎಡವಿದೆ, ಎಂಬುದನ್ನು ತೋರಿಸಿದರೆ, ನಾವು ಅದಕ್ಕೆ ಉತ್ತರವನ್ನು ಹೇಳುತ್ತೇವೆ, ತಾವು ಇಲ್ಲಿ ರೈತವಿರೋಧಿ ಎಂದು ದೊಡ್ಡದಾಗಿ ಘೋಷಣೆ ಮಾಡಿದರೆ ಆಗುತ್ತದೆಯೇ? They are not going to end. We are going to start the work.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇವರು ಪ್ರಿಲಿಮಿನರಿ ನೋಟಿಫಿಕೇಶನ್ ಇಷ್ಟೂ ಮಾಡಿದರು, ಅದರ ಪ್ರಕಾರ ಫೈನಲ್ ನೋಟಿಫಿಕೇಶನ್ ಮಾಡಲಿಲ್ಲ.

ಅಧ್ಯಕ್ಷರು :- ಮಾಡುತ್ತಿದ್ದೇವೆಂದು ಹೇಳಿದ್ದಾರಲ್ಲಾ ....

ಶ್ರೀ ಆರ್. ಅಶೋಕ್ :- ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ 50 ಎಕರೆಯನ್ನು ಮಾಡುತ್ತಿರುವಂಥಾದ್ದು ತಪ್ಪು, ಇದನ್ನು ನಾನು ವಿರೋಧ ಮಾಡುತ್ತೇನೆ, ರೈತರಿಗೆ ಐದು ವರ್ಷದಿಂದ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತಿಲ್ಲ, ನಾನು ಇದರ ಬಗ್ಗೆ ವಿರೋಧ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

ಧಾರವಾಡ ನಗರದಲ್ಲಿ ಸ್ಮಶಾನ ರುದ್ರಭೂಮಿಯ ನಿರ್ಮಾಣ

233 (2347) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳೆಯುತ್ತಿರುವ ನಗರಗಳಿಗೆ ಅನುಸಾರವಾಗಿ ರುದ್ರಭೂಮಿಗಳಿಗೆ ಜಮೀನು ಒದಗಿಸಬೇಕಾಗಿರುವುದು ಸರ್ಕಾರದ ಕರ್ತವ್ಯ ಅಲ್ಲವೇ; ಹಾಗಾದರೆ ಧಾರವಾಡ ನಗರದಲ್ಲಿ ರುದ್ರಭೂಮಿಗಳ ನಿರ್ಮಾಣ ಬಂದಿರುವ ಮನವಿಗಳೆಷ್ಟು; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಆ. ಪ್ರತಿ ಬಡಾವಣೆಗಳಲ್ಲಿ ಪ್ರತಿಯೊಂದು ವರ್ಗದ ಜನತೆಯ ಅಂತ್ಯ ಸಂಸ್ಕಾರ ಮಾಡಲು ನಿವೇಶನ (ಭೂಮಿ) ಒದಗಿಸುವಲ್ಲಿ ಭೂಮಿ ಮಶಪಡಿಸಿಕೊಂಡಿರುವ ವಿವರ ನೀಡುವುದು; ಹಾಗಾದರೆ ಎಷ್ಟುತಿಂಗಳಲ್ಲಿ ಕಾರ್ಯ ಪೂರ್ಣಗೊಳಿಸಲಾಗುವುದು;

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ. ಹೌದು, ಧಾರವಾಡ ನಗರಕ್ಕೆ" ಸಂಬಂಧಪಟ್ಟಂತೆ ಗುಲಗುಂಟಿ ಕೊಪ್ಪದಲ್ಲಿ ರುದ್ರಭೂಮಿ ಉದ್ದೇಶಕ್ಕಾಗಿ ಸ.ನಂ. 70 ರಿಂದ 76ರ ವರೆಗಿನ ಸುಮಾರು 19 ಎಕರೆ ಜಮೀನನ್ನು ಸ್ಮಶಾನಕ್ಕಾಗಿ ಭೂಸ್ವಾಧೀನ ಮಾಡಿ ಕೊಳ್ಳಲು ಸಾರ್ವಜನಿಕರಿಂದ ಮನವಿ ಬಂದಿದ್ದು, ಇದನ್ನು ಭೂಸ್ವಾಧೀನ ಕಾಯ್ದೆಯಂತೆ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಲು ಸಹಾಯ ಆಯುಕ್ತರು, ಧಾರವಾಡ ಇವರಿಗೆ ಸೂಚಿಸಲಾಗಿದೆ.

ಆ. ಪ್ರಸ್ತುತ ಒಟ್ಟು 19 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ನಿಗದಿತ 24 ತಿಂಗಳು ಅಗತ್ಯವಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಪ್ರತಿ ಬಡಾವಣೆಯ ಹಾಗೂ ಪ್ರತಿ ವರ್ಗದ ಜನತೆಯ ಅಂತ್ಯ ಸಂಸ್ಕಾರಕ್ಕೆ ಅಗತ್ಯವಿರುವ ಭೂಮಿಯನ್ನು ಲಭ್ಯತೆಯ ಆಧಾರದ ಮೇಲೆ ಒದಗಿಸಲಾಗುವುದು.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ :- ಮಾನ್ಯ ಅಧ್ಯಕ್ಷರೇ, ನಮ್ಮ ಧಾರವಾಡದ ಗುಲಗಂಜಿಕೊಪ್ಪದಲ್ಲಿ 19 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲು, ಸಾರ್ವಜನಿಕರಿಂದ ಮನವಿ ಬಂದಿದ್ದು, ಇದನ್ನು ಭೂ ಸ್ವಾಧೀನ ಕಾರ್ಯವಂತೆ ಭೂ ಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಲು ಸಹಾಯಕ ಆಯುಕ್ತರು, ಧಾರವಾಡ, ಇವರಿಗೆ ಸೂಚಿಸಲಾಗಿದೆ ಎಂದು ಸರ್ಕಾರ ಉತ್ತರ ಕೊಟ್ಟಿದೆ, ಇಲ್ಲಿ ಬಹಳ ದಿವಸಗಳಿಂದ ಅನಧಿಕೃತ ಕಟ್ಟಡಗಳು ಬೆಳೆಯುತ್ತಿವೆ. ಇಲ್ಲಿ ಅನೇಕ ಜನರನ್ನು ಹೂಳಿರುವಂತಹ ಸ್ಥಳವಾಗಿದ್ದು, ಈ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವಂತೆ ನಗರಸಭೆಯವರಿಗೆ, ಮತ್ತು ಮಹಾ ನಗರ ಸಭೆಯವರಿಗೆ ಹೇಳಿದ್ದು ಇಲ್ಲಿ ಈಗಾಗಲೇ ಅನಧಿಕೃತ ಕಟ್ಟಡಗಳು ಬರುತ್ತಿವೆ, ಇದನ್ನು ಭೂಸ್ವಾಧೀನ ಮಾಡಿಕೊಂಡು ಸ್ಮಶಾನ ಮಾಡುವಂಥಾದ್ದು ಸರ್ಕಾರದ ಕರ್ತವ್ಯವಾಗಿದೆ. ಇದಲ್ಲದೆ ಇನ್ನೂ ಮೂರು ಕಡೆಗಳಲ್ಲಿ ಭೂಮಿ ಬೇಕೆಂದು ನಾನೇ ಸ್ವತಃ ಹೇಳಿದ್ದೇನೆ, ಏಕೆಂದರೆ ಈಗ ಧಾರವಾಡ ನಗರ ಬಹಳ ಬೆಳೆಯುತ್ತಿದೆ, ನಾನು 1983 ರಿಂದ ರಾಜಕೀಯದಲ್ಲಿ ಇದ್ದೇನೆ, ಆಗಲಿಂದಲೂ ನಾನು ಧಾರವಾಡ ನಗರವನ್ನು ನೋಡುತ್ತಿದ್ದೇನೆ ಇದು ಸಾಕಷ್ಟು ವಿಶಾಲವಾಗಿ ಬೆಳೆಯುತ್ತಿದೆ. ಅಲ್ಲಿ ಸ್ಮಶಾನಗಳ ಅವಶ್ಯಕತೆ ಇದೆಯೆಂದು, ಮೂರು ಭಾಗಗಳಲ್ಲಿ ಸ್ಮಶಾನ ಬೇಕೆಂದು, ನಾನೇ ಸ್ವತಃ ಜಿಲ್ಲಾಧಿಕಾರಿಯವರಿಗೆ ಹಾಗೂ ಅಸಿಸ್ಟೆಂಟ್ ಕಮೀಷನರ್‌ರವರಿಗೆ, ಬರೆದಿದ್ದೇನೆ, ನೀವು ಈ ಮೂರು ಕಡೆಗಳ ಬಗ್ಗೆ ಏನೂ ತಿಳಿಸಿಲ್ಲ ಹಳಿಯಾಳ ಕೋಡಿಗೆ ಕಲಗಟಗಿ, ಕೋಡಿಗೆ ನಗರ ಬೆಳೆದಿದೆ ಹಾಗಾಗಿ ನಮಗೆ ಮೂರು ಭಾಗಗಳಿಗೆ ಸ್ಮಶಾನದ ಅವಶ್ಯಕತೆ ಇದೆ. ಈಗ ಗುಲಗಂಜಿಕೊಪ್ಪದಲ್ಲಿ ಭೂಮಿಯನ್ನು ಯಾವಾಗ ವಶ ಮಾಡಿಕೊಳ್ಳುತ್ತೀರಿ, ಇನ್ನು ಉಳಿದ ಮೂರು ಜಾಗದಲ್ಲಿ ಯಾವಾಗ ಜಮೀನನ್ನು ವಶ ಮಾಡಿಕೊಳ್ಳುತ್ತಿರೆಂಬುದನ್ನು ಮಾನ್ಯ ಮಂತ್ರಿಯವರು ದಯವಿಟ್ಟು ಹೇಳಬೇಕು, ಈ ನಗರ ಬೆಳೆಯುತ್ತಿರುವುದರಿಂದ, ಈ ಜಮೀನುಗಳನ್ನು ವಶಪಡಿಸಿಕೊಳ್ಳುವಂತಹ ಅವಶ್ಯಕತೆ ಇದೆಯೆಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಗುಲಗಂಜಿ ಕೊಪ್ಪದಲ್ಲಿ 19 ಎಕರೆ ಜಮೀನನ್ನು ಉಪ ವಿಭಾಗಾಧಿಕಾರಿಗಳಿಗೆ ನಿರ್ದೇಶನ ಕೊಟ್ಟು ವಶಪಡಿಸಿಕೊಳ್ಳಲು ತಿಳಿಸಲಾಗಿದೆ. ಕೆಲಸ ಪ್ರಾರಂಭವಾಗಿದೆ. ಇನ್ನು ಉಳಿದ ಎರಡು ಕಡೆಗಳಲ್ಲಿ ಏನು ಹೇಳಿದ್ದೀರಿ, ಇದು ಯಾವ ಹಂತದಲ್ಲಿದೆ. ಎಂಬುದನ್ನು ಪರಿಶೀಲನೆ ಮಾಡಿ, ಶೀಘ್ರವಾಗಿ ಕಾರ್ಯಕ್ರಮತೆಗೆದುಕೊಳ್ಳಬೇಕೆಂದು ಆದೇಶವನ್ನು ಕೊಡುತ್ತೇನೆ. ಮತ್ತೆ ಮುಖ್ಯವಾಗಿ ಈ ಪಟ್ಟಣದ ಭಾಗಗಳಲ್ಲಿ ಜಮೀನು ಸಿಗುವಂಥಾದ್ದು ಬಹಳ ಕಷ್ಟವಾಗಿದೆ, ಮತ್ತೆ ವಾಲ್ಯೂಯೇಷನ್ ಕೂಡ ಜಾಸ್ತಿಯಾಗಿದೆ. ಈಗ ಎದಷ್ಟು ಜಾಗ್ರತೆ ಈ 19 ಎಕರೆಯ ಕೆಲಸವನ್ನು ಮಾಡಿಸಿ, ಉಳಿಕೆಯ ಜಮೀನಿನ ಸ್ವಾಧೀನ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಚಂದ್ರಕಾಂತ್ ದಿ ಬೆಲ್ಲದ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಜಮೀನು ಸಿಗುವುದು ಕಷ್ಟವೆಂದು ಹೇಳುತ್ತಿದ್ದಾರೆ, ಆಗ ನಾನು ಧಾರವಾಡದ ಶಾಸಕನಾಗಿ ಜಮೀನನ್ನು ಕೊಡಿಸುವುದಕ್ಕೆ ತಯಾರಿದ್ದೇನೆ, ಈಗ ನಾನು ಮೂರು ಕಡೆಗಳಲ್ಲಿ ಕೇಳಿರುವಂಥಾದ್ದಕ್ಕೆ, ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡಲಿಲ್ಲ. ನಾನು ಮಾನ್ಯ ಜಿಲ್ಲಾಧಿಕಾರಿಯವರಿಗೆ, ಅಸಿಸ್ಟೆಂಟ್ ಕಮೀಷನರ್‌ರವರನ್ನು ಕೇಳಿದ್ದೇನೆ, ಮತ್ತೆ ನಾಗರೀಕರು ಈ ಭಾಗಗಳಲ್ಲಿ ಸ್ಮಶಾನ ಬೇಕೆಂದು ಕೇಳಿದ್ದಾರೆ. ಆದರೆ ಇದಕ್ಕೆ ಸರ್ಕಾರ ಉತ್ತರವನ್ನು ಕೊಡಲಿಲ್ಲ. ಈಗ ಗುಲಗಂಜಿ ಕೊಪ್ಪವನ್ನು ಹೊರತುಪಡಿಸಿ, ಇನ್ನು ಮೂರು ಜಾಗಗಳು ಏನಿರೆ, ಅಲ್ಲಿ ಸ್ಮಶಾನದ ಅವಶ್ಯಕತೆ ಇದೆ, ಮತ್ತೆ ಜಮೀನನ್ನು ಕೊಡಿಸುವಂಥಾದ್ದು ನಾನು ಮಾಡುತ್ತೇನೆ, ಮತ್ತೆ ಬೆಲೆಯೂ ಕಡಿಮೆಯಲ್ಲಿದೆ, ಈಗ ಊರು ಬೆಳೆಯುತ್ತಾ ಬೆಲೆಯೂ ಹೆಚ್ಚುತ್ತಾ ಹೋಗುತ್ತಿದೆ, ನಾನು ಕಡಿಮೆ ಬೆಲೆಯಲ್ಲಿ ಕೊಡಿಸುವುದಕ್ಕೆ ತಯಾರಿದ್ದೇನೆ, ದಯವಿಟ್ಟು ಈ ಎಲ್ಲಾ ಕಡೆಗಳಲ್ಲೂ ಸ್ಮಶಾನಕ್ಕೆ ಭೂಮಿಯನ್ನು ಕೊಡಿಸಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ಮಂತ್ರಿಯವರೇ, ಸ್ಮಶಾನಕ್ಕೆ ಭೂಮಿ ಬೇಕೆಂದು ಹೇಳುತ್ತಿದ್ದಾರೆ ಬೇಗ ಬೇಗ ಮಾಡಿಸಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಅಧ್ಯಕ್ಷರೇ, ಈಗ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಸ್ಮಶಾನ ಭೂಮಿಗೆ ಹಣವನ್ನು ಎಷ್ಟು ಕೊಡುತ್ತಾರೆಂಬುದನ್ನು ಹೇಳಬೇಕು.

Mr. Speaker :- No, This is only pertaining to Dharwad. You cannot ask other questions. I will not allow. ನಿಮ್ಮ ಹಾಗೆ ಇನ್ನೂ ನಾಲ್ಕೈದು ಸದಸ್ಯರುಗಳು ಕೇಳುತ್ತಾರೆ, ಮಾನ್ಯ ಮಂತ್ರಿಯವರೇ, ತಾವು ಉತ್ತರವನ್ನು ಕೊಡಬೇಡಿ. Please do not answer.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಬರೀ ಧಾರವಾಡ ಜಿಲ್ಲೆಗೆ ಮಾತ್ರ ಸ್ಮಶಾನವನ್ನು ಕೇಳುವುದಲ್ಲ, ಎಲ್ಲಾ ನಗರಗಳಲ್ಲೂ ಸ್ಮಶಾನ ಬೇಕಾಗಿದೆ.

ಅಧ್ಯಕ್ಷರು :- ನೀವು ಕೇಳಿದರೆ ಎಲ್ಲರೂ ಕೇಳುತ್ತಾರೆ.

(ಗೊಂದಲ)

ಮಾನ್ಯ ಸದಸ್ಯರು :- ಧಾರವಾಡ ನಗರದಲ್ಲಿ ಮಾತ್ರವೇ ಜನ ಸಾಯುವುದು ಬೇರೆ ಎಲ್ಲೂ ಸಾಯುವುದಿಲ್ಲವೇ?

ಅಧ್ಯಕ್ಷರು :- ಈಗ ಧಾರವಾಡ ನಗರಕ್ಕೆ ಮಾತ್ರ ಪ್ರಶ್ನೆ ಕೇಳಿರುವಂಥಾದ್ದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಇದು ಜನರಲ್ ಪ್ರಶ್ನೆಯಾಗಿದೆ.

ಅಧ್ಯಕ್ಷರು :- ಇದು ಧಾರವಾಡದ್ದೂ ಮಾತ್ರ, ಕಡೂರು ಅಥವಾ ಬೇರೆ ಯಾವುದೂ ಇಲ್ಲ. ಮಾನ್ಯ ಮಂತ್ರಿಯವರೇ, ತಾವು ಧಾರವಾಡಕ್ಕೆ ಸಂಬಂಧಪಟ್ಟಹಾಗೆ ಉತ್ತರವನ್ನು ಹೇಳಿ, not others.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನಾನು ಈಗಾಗಲೇ ಅದಷ್ಟು ಜಾಗ್ರತೆ ಮಾಡಿಸಿಕೊಡುತ್ತೇನೆಂದು ಹೇಳಿದ್ದೇನೆ. ಮಾನ್ಯ ಕೃಷ್ಣಮೂರ್ತಿಯವರೇ, ತಾವು ಬೇರೆ ಪ್ರಶ್ನೆಯನ್ನು ಹಾಕಿ.

ಅಧ್ಯಕ್ಷರು :- ತಾವು ಕಡೂರುನಲ್ಲಿ ಆಗಬೇಕೆಂದು ಹೇಳಿ, ಆಗ ನಾನು ಆಲೋ ಮಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಇದು ಜನರಲ್ ಇಷ್ಯು.

ಅಧ್ಯಕ್ಷರು :- ನಾನು ಅಲೋ ಮಾಡುವುದಿಲ್ಲ. I will not allow.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಸಭಾಧ್ಯಕ್ಷರೇ, ಹೀಗೆ ಹೇಳಿದರೆ ಹೇಗೆ?

ಅಧ್ಯಕ್ಷರು :- ಇಲ್ಲಿ ನೂರು ಜನ ಸದಸ್ಯರು ವಿಷಯವನ್ನು ರೈಜ್ ಮಾಡುತ್ತಾರೆ, ಆಗ ಏನು ಮಾಡಬೇಕು? ಬಾಗೇಪಲ್ಲಿ ಕೇಳುತ್ತಾರೆ, ಇನ್ನೊಂದು ಕೇಳುತ್ತಾರೆ. I will not allow.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುವುದು ಬೇಡ, ನನಗೆ ಎರಡು ನಿಮಿಷಗಳು ಮಾತನಾಡಲು ಅವಕಾಶವನ್ನು ಕೊಡಿ.

ವಿಶ್ವಬ್ಯಾಂಕ್ ಹಾಗೂ ಹುಡ್ಕೋ ನೆರವಿನಿಂದ ತೆಗೆದುಕೊಂಡಿರುವ ರಸ್ತೆಗಳ ಬಗ್ಗೆ

235 (1355) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ವಿಶ್ವಬ್ಯಾಂಕಿನಿಂದ ಮತ್ತು ಹುಡ್ಕೊ ನೆರವಿನಿಂದ ತೆಗೆದುಕೊಂಡಿರುವ ರಸ್ತೆಗಳು ಯಾವುವು; ಜಿಲ್ಲಾವಾರು ವಿವರ ನೀಡುವುದು;

ಆ. ಈ ರಸ್ತೆಗಳ ದುರಸ್ತಿಗಾಗಿ ವಿಶ್ವಬ್ಯಾಂಕ್ ಮತ್ತು ಹುಡ್ಕೊದಿಂದ ಬಿಡುಗಡೆಯಯಾಗಿರುವ ಹಣ ಎಷ್ಟು?

ಇ. ಈ ರಸ್ತೆಗಳ ಕಾಮಗಾರಿಗಳು ಮುಗಿದಿವೆಯೇ; ಇಲ್ಲದಿದ್ದರೆ ಕಾರಣಗಳೇನು;

ಈ. ಈ ಯೋಜನೆಯಿಂದ ರಸ್ತೆಗಳ ಸುಧಾರಣೆಯನ್ನು ಯಾವ ರೀತಿ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ. ವಿಶ್ವಬ್ಯಾಂಕ್ ಹಾಗೂ ಹುಡ್ಕೊದಿಂದ ತೆಗೆದುಕೊಂಡ ರಸ್ತೆಗಳ ವಿವರ ಲಗತ್ತಿಸಿದೆ.

ಆ. ವಿಶ್ವಬ್ಯಾಂಕ್ ಯೋಜನೆಯ ಮೌಲ್ಯ 2030 ಕೋಟಿ ರೂ. ಇದರಲ್ಲಿ ಶೇಕಡ 80 ಭಾಗವಾದ 1635 ಕೋಟಿ ಸಾಲವನ್ನು ಕೇಂದ್ರ ಸರ್ಕಾರದ ಮೂಲಕ ಮಂಜೂರು ಮಾಡಲಾಗಿದೆ. ಉಳಿದ 395 ಕೋಟಿ ರೂ.ಗಳು ಕರ್ನಾಟಕ ಸರ್ಕಾರದ ಭಾಗವಾಗಿರುತ್ತದೆ. ಕೇಂದ್ರ ಸರ್ಕಾರವು ವಿಶ್ವಬ್ಯಾಂಕ್‌ನ ಈ ಸಾಲವನ್ನು 70% ಸಾಲದ ರೂಪದಲ್ಲಿ ಹಾಗೂ 30% ಅನುದಾನ ರೂಪದಲ್ಲಿ ಕರ್ನಾಟಕ ರಾಜ್ಯಕ್ಕೆ ನೀಡುವುದು, ಇದುವರೆಗೆ ವೆಚ್ಚ ಮಾಡಿದ ರೂ. 162 ಕೋಟಿಯಲ್ಲಿ ಶೇಕಡ 80% ಭಾಗವನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿದೆ.

ಹುಡ್ಕೋದಿಂದ ರೂ. 150 ಕೋಟಿ ಬಿಡುಗಡೆಯಾಗಿದೆ.

ಇ. ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. ಒಟ್ಟಾರೆ 41 ಪ್ಯಾಕೇಜ್‌ಗಳಲ್ಲಿ 15 ಪ್ಯಾಕೇಜ್‌ಗಳ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನೂ 9 ಕಾಮಗಾರಿಗಳು ಇತ್ತೀಚೆಗೆ ಪ್ರಾರಂಭಿಸಲಾಗಿದೆ. 5 ಪ್ಯಾಕೇಜ್‌ಗಳ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆದಿದೆ. ಬಾಕಿ ಉಳಿದ 12 ಪ್ಯಾಕೇಜ್‌ಗಳನ್ನು ಅಂದಾಜು ತಯಾರಿಸಿ